ಹಾಗಾದರೆ ನಾವು 'ಸತ್ಯ'ವಾಗಿಯೂ ಬಡವರೆ? ಅಥವಾ ಶ್ರೀಮಂತರೆ? ನಾವು ಎಣಿಸಿದಷ್ಟು ಉತ್ತರ ಸುಲಭವಲ್ಲ. ಎಚ್ಚರದ ಜಗತ್ತನ್ನು ಗಮನದಲ್ಲಿಟ್ಟುಕೊಂಡು 'ನಾನು ಬಡವ'ನೇ ಅಲ್ಲವೆ – ಎನ್ನಬಹುದು. ಆದರೆ ನಮ್ಮ ಅನುಭವವನ್ನು ಹೆಚ್ಚು ಹೆಚ್ಚು ಶಾಸ್ತ್ರೀಯವಾಗಿ, ಎಂದರೆ ವೈಜ್ಞಾನಿಕವಾಗಿ ವಿಶ್ಲೇಷಿಸಲು ತೊಡಗಿದರೆ ನಮ್ಮ ಪ್ರಶ್ನೆ ಜಟಿಲವಾಗುತ್ತ ಹೋಗುವುದು. ಸದ್ಯಕ್ಕೆ ಅಷ್ಟೆಲ್ಲ ವಿಶ್ಲೇಷಣೆ ಬೇಡ. ಇದರ ತಾತ್ಪರ್ಯವಾಗಿ ಹೇಳುವುದಾದರೆ, ಎಚ್ಚರ (ಅಥವಾ ಜಾಗ್ರತ್) ಮತ್ತು ಕನಸು (ಅಥವಾ ಸ್ವಪ್ನ) – ಎರಡೂ ಕೂಡ ಅಂತಿಮ ಸತ್ಯಸ್ಥಿತಿಗಳಲ್ಲ; ಅವೆರಡು ಅವುಗಳ ಪಾತಳಿಯಲ್ಲಿ ನಿಜ. ಎಂದರೆ ಎಚ್ಚರದ ಸ್ಥಿತಿಯಲ್ಲಿ ಎಚ್ಚರವೂ, ಕನಸಿನ ಸ್ಥಿತಿಯಲ್ಲಿ ಕನಸೂ 'ಸತ್ಯ' ಅಷ್ಟೆ; ಇದನ್ನೇ ವ್ಯಾವಹಾರಿಕ ಸತ್ಯ ಎಂದು ಕರೆದಿದ್ದಾರೆ. ಆದರೆ ನಮ್ಮ ನಿತ್ಯದ ಅನುಭವ ಹೀಗೆ ಕನಸನ್ನು 'ನಿಜ' ಎಂದು ಒಪ್ಪಿಕೊಳ್ಳುವುದಕ್ಕೆ ಅಷ್ಟು ಸುಲಭವಾಗಿ ನಮ್ಮನ್ನು ಬಿಡದು; ಕನಸನ್ನು ತೋರಿಕೆ, ಸುಳ್ಳು – ಎಂದೂ, ಎಚ್ಚರವನ್ನು ವಾಸ್ತವ, ನಿಜ – ಎಂದೂ ನಮ್ಮ ಬುದ್ಧಿಯು ಹಟ ಮಾಡುತ್ತದೆ.

ಚೀನಾದೇಶದ ದಾರ್ಶನಿಕನಿಗೆ ಒಮ್ಮೆ ಹೀಗಾಯಿತಂತೆ: ಅವನು ಇದ್ದಕ್ಕಿದ್ದಂತೆ ಚಿಟ್ಟೆಯಾಗಿ ಬದಲಾವಣೆ ಹೊಂದಿದಂತೆ ಕನಸನ್ನು ಕಂಡನಂತೆ. ಎಚ್ಚರವಾದಮೇಲೆ ಅವನಿಗೊಂದು ಸಂಶಯ ಕಾಡತೊಡಗಿತು: 'ಈಗ ನಾನು ಚಿಟ್ಟೆಯಾದಂತೆ ಕನಸನ್ನು ಕಾಣುತ್ತಿರುವ ಮನುಷ್ಯನೋ? ಅಥವಾ ಮನುಷ್ಯನಾಗಿ ಬದಲಾವಣೆ ಹೊಂದಿದಂತೆ ಕನಸನ್ನು ಕಾಣುತ್ತಿರುವ ಚಿಟ್ಟೆಯೋ?'

ಎಚ್ಚರ ಮತ್ತು ಕನಸುಗಳ ಸಾಪೇಕ್ಷತೆಯನ್ನು ಈ ಘಟನೆ ಅದ್ಭುತವಾಗಿ ನಿರೂಪಿಸಿದೆ. ಜಗತ್ತು ನಾವು ಕಾಣುತ್ತಿರುವುದಕ್ಕಿಂತಲೂ ಭಿನ್ನವಾಗಿದೆ. ನಾವು ನಮ್ಮ ಯಾವ ಅನುಭವವನ್ನೂ 'ಇದೇ ಸತ್ಯ' ಎಂದು ಹಟ ಮಾಡಿ ಹೇಳಲು ಆಗದು. ಇಂಥದೊಂದು ಅರಿವು ನಮಗೆ ಒದಗಿದರೆ ಆಗ ನಮ್ಮ ಜೀವನವು ಸೊಗಯಿಸುವುದು ಖಂಡಿತ.

ಎಚ್ಚರ–ಕನಸುಗಳು ಪಾರಮಾರ್ಥಿಕ ಸತ್ಯಗಳಾಗದಿರಬಹುದು; ಆದರೆ ಇವೆರಡು ನಮ್ಮ ಇರವು–ಅರಿವು–ನಲಿವುಗಳ ಬಗ್ಗೆ ಸಾಕಷ್ಟು ವಿವರಗಳನ್ನು ಒದಗಿಸುವಂಥವು. 'ನಾವಿಲ್ಲಿ ಬಂದಿರುವುದು ಜೀವಿಸಲು ಅಲ್ಲ; ನಾವಿಲ್ಲಿರುವುದು ನಿದ್ರಿಸಲು, ಕನಸು ಕಾಣಲು' ಎಂದು ಪ್ರಾಚೀನ ಅಜ್‌ಟೆಕ್ ಸಂಸ್ಕೃತಿಯ ಸೊಲ್ಲೊಂದು ಮನನೀಯವಾಗಿದೆ. ಮನುಷ್ಯನ ಕನಸಿನಲ್ಲಿಯೇ ಅವನ ಜೀವನವಿದೆ; ಆ ಜೀವನದ ಪ್ರತಿಯೊಂದು ವಿವರವೂ ಸುಪ್ತವಾಗಿರುತ್ತದೆ ಎಂದು ಹಲವರು ಚಿಂತಕರು ಉದ್ಗರಿಸಿರುವುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ನಮ್ಮ ಜೀವನಕ್ಕೆ ದಿಕ್ಕನ್ನು ತೋರಿಸಬಲ್ಲಂಥ ಸಂಗತಿಗಳನ್ನು ಕನಸುಗಳು ಬಿತ್ತರಿಸುತ್ತವೆ ಎಂಬುದನ್ನು ಹಲವರು ಮನೋವಿಜ್ಞಾನಿಗಳು ಒಪ್ಪುತ್ತಾರೆ. **'There is a dream dreaming us'** 'ನಮ್ಮನ್ನು ಕನಸಾಗಿ ಕಾಣುತ್ತಿರುವ ಕನಸೊಂದಿದೆ'. ಈ ಮಾತಿನ ಮೂಲ ಎಷ್ಟು ಕವಲುಗಳಾಗಿ ವಿಸ್ತಾರವಾಗುತ್ತದೆ ಎನ್ನುವುದೇ ಕುತೂಹಲಕಾರಿಯಾದುದು. ಮಹಾವಿಷ್ಣುವಿನ ಯೋಗನಿದ್ರೆಗೂ ಬ್ರಹ್ಮಾಂಡದ ಸೃಷ್ಟಿಗೂ ನಂಟಿರುವುದನ್ನು ನಮ್ಮ ಪುರಾಣಗಳು ಹೇಳಿವೆ. ಎಂದರೆ ನಮ್ಮ ಒಟ್ಟು ಸೃಷ್ಟಿಯ ಮೂಲಕ್ಕೂ ನಿದ್ರಾ–ಸ್ವಪ್ನಗಳಿಗೂ ಸಂಬಂಧ ಇದೆ ಎಂದಾಯಿತು. ನಾವು ಸೃಷ್ಟಿಯ ಭಾಗವೇ ಅಲ್ಲವೆ? ಹೀಗಾಗಿ ನಮಗೂ ಸೃಷ್ಟಿಗೂ ನಮ್ಮ ಕನಸಿಗೂ ಏಕಸೂತ್ರ ಇರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪ್ರಪಂಚದ ಬೇರೆ ಬೇರೆ ಸಂಸ್ಕೃತಿಗಳ ಪುರಾಣಲೋಕವನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ ಜೋಸೆಫ್ ಕ್ಯಾಂಬೆಲ್ ಅಂಥವರು ಈ ಸಂಬಂಧಸೂತ್ರದ ಬಗ್ಗೆ ಸೊಗಸಾಗಿ ಬರೆದಿದ್ದಾರೆ. ನಮ್ಮ ಜೀವನದ ಭಾಗ್ಯ,